

# ಪುತ್ತೂರಿನಲ್ಲೊಂದು ಗುಹಾಲಯ!

ಮನೆ ಭಿನ್ನವಾಗಿರಬೇಕು, ಕಡಿಮೆ ಖರ್ಚಿನಲ್ಲಿ ಉಪಯುಕ್ತವೂ ಆಗಬೇಕು ಎಂದು ಆಶಿಸುವವರು ಗುಹಾಲಯದತ್ತ ಕಣ್ಣು ಹಾಯಿಸಬಹುದು.

■ ನಿರಂಜನ ವಾನಳ್ಳಿ

ಪುತ್ತೂರಿನಲ್ಲಿ 'ಮಾಸ್ಟರ್ ಪ್ಲಾನರಿ' ಎಂಬುದು ಎಲ್ಲರೂ ಬಲ್ಲ ಹೆಸರು. ಮಂಗಳೂರು ಹೆದ್ದಾರಿಯಲ್ಲಿ ನೆಹರೂ ನಗರ ಸಮೀಪ ಬಲಗಡೆಗೆ ಮಾಸ್ಟರ್ ಪ್ಲಾನರಿಯ ದೊಡ್ಡ ಉದ್ಯಮ. ಸಾವಿರಾರು ಜನ ಕೆಲಸಗಾರರು. ಕರ್ನಾಟಕದಲ್ಲಿ ಕಡಿಮೆ ಖರ್ಚಿನ ಕಟ್ಟಡ ನಿರ್ಮಾಣದಲ್ಲಿ ಹೆಸರುವಾಸಿಯಾಗಿರುವುದು ಮಾಸ್ಟರ್ ಪ್ಲಾನರಿ. ಸಿಮೆಂಟು ಕಾಂಕ್ರೀಟ್ ಬಳಸಿ ಮರವನ್ನು ನಾಚಿಸುವಂತಹ ಕುರ್ಚಿ, ಮಂಚ, ಸೋಫಾದಿಂದ ಹಿಡಿದು ತುಳಸಿ ಕಟ್ಟೆಯವರೆಗೆ ಮನೆಗೆ ಏನು ಸಾಮಾನು ಬೇಕು ಎಲ್ಲಾ ಇಲ್ಲಿ ಸಿದ್ಧ. ಆದರೆ ಸಿಮೆಂಟಿನಲ್ಲಿ!

ಈಚೆಗೆ ಮಾಸ್ಟರ್ ಪ್ಲಾನರಿಗೆ ಹೋಗಿದ್ದಾಗ 'ನೀವು ಗುಹಾಲಯ ನೋಡಲೇಬೇಕು' ಎಂದರು ಅದರ ಮಾಲಿಕ ಆನಂದಕುಮಾರ್. ಅದನ್ನು ತೋರಿಸಲು ಎಂಜಿನಿಯರ್ ಮಗ ಅರ್ಜುನನನ್ನೂ ಜೊತೆಗೆ ಕಳಿಸಿಕೊಟ್ಟರು. ಸಮೀಪದ ಹಳ್ಳಿಯ ತೋಟದಲ್ಲಿ ನಿರ್ಮಾಣಗೊಂಡಿರುವ ಗುಹಾಲಯವನ್ನು ಇಲ್ಲಿ ನಿರ್ಮಿಸಿದ್ದು ಪ್ರಯೋಗಕ್ಕಾಗಿ. ಆದರೆ ಈ ಪ್ರಯೋಗ ಬಹಳ ಜನರ ಗಮನ ಸೆಳೆಯುತ್ತಿದ್ದು, ಮನೆ ಇದ್ದರೆ ಹೀಗಿರಬೇಕು ಎಂದು ಯಾರಿಗಾದರೂ ಅನಿಸುವಂತಿದೆ! ಈಗಾಗಲೇ ಇಂಥದ್ದೊಂದು ಕೊಡಗಿನಲ್ಲೂ ಸಿದ್ಧಗೊಂಡಿದ್ದು ಇನ್ನೂ ಅನೇಕ ಬೇಡಿಕೆ ಬರ್ತಾ ಇರುವುದಾಗಿ ಆನಂದ ಹೇಳಿದರು.

ಈ ಗುಹಾಲಯದ ವಿಶೇಷವೆಂದರೆ ಹೊರಗಡೆಯಿಂದ ಸಣ್ಣ ಬಿಲದ ಹಾಗೇ ಕಾಣುತ್ತದೆ. ಒಳಗೆ ಒಂದು ಮನೆ ಇರಬಹುದು ಎಂದು ಗೊತ್ತೇ ಆಗುವುದಿಲ್ಲ. ಒಳಹೋದರೆ ಮಾತ್ರ ಅದೊಂದು ಆಧುನಿಕ ಸೌಕರ್ಯಗಳುಳ್ಳ ಚಂದದ ಮನೆ.

ಗುಹಾಲಯದ ಒಳಬಂದರೆ ಮೊದಲಿಗೆ ಜಗುಲಿಯಿದೆ. ಅದು ದಿವಾನಖಾನೆ ಎಂತಲೂ ಅನ್ನಬಹುದು. ಕುಳಿತುಕೊಳ್ಳಲು ಆಸನಗಳು, ಟೀವಿ, ಗಾಳಿಪಂಕ, ಒಂದು ಟೇಬಲ್, ಅದರ ಮೇಲೆ ಪಪ್ಪಾಯಿ ಹಣ್ಣು, ನಿಂಬೆ ಹಣ್ಣು ನಿಜವೇನೋ ಎನ್ನುವ ಭ್ರಮೆ ಹುಟ್ಟಿಸುತ್ತವೆ. ಆಸನಗಳ ಹಿಂದೆ ಒರಗಲು ಇರುವ ವ್ಯವಸ್ಥೆ ಕಲ್ಲಿನದೇನೋ ಎನಿಸುತ್ತದೆ. ಆದರೆ ಇವೆಲ್ಲ ಮಾಸ್ಟರ್ ಪ್ಲಾನರಿಯ ಸಿಮೆಂಟು ಕಾಂಕ್ರೀಟ್ ಸೃಷ್ಟಿಗಳ ಕೈಚಳಕ. ಇನ್ನೊಂದು ಕಡೆ ಶೌಚಾಲಯವಂತೂ ಪಂಚತಾರಾ ವ್ಯವಸ್ಥೆಗೆ ಏನೂ ಕಡಿಮೆಯಿಲ್ಲ. ಅತ್ಯಾಧುನಿಕ ಬಚ್ಚಲು ಮನೆ ಈ ಗುಹಾಲಯದ್ದು ಎಂದರೆ ತಪ್ಪಿಲ್ಲ. ಇನ್ನೊಂದು ಕಡೆ ಮಲಗುವ ಕೋಣೆ. ಇದರ ವಾತಾವರಣ ಯಾವಾಗಲೂ ಚಳಿಯೂ ಅಲ್ಲ. ಸೆಕೆಯೂ ಅಲ್ಲ ಎಂಬಂತಿದೆ. ಒಂದು ಪಂಚತಾರಾ ಹೊಟೇಲಿನಲ್ಲಿ ಕಾಯ್ದಿರಿಸಿದ ಕೋಣೆ ಹೇಗಿರುತ್ತದೆಯೋ ಈ ಗುಹಾಲಯದ ಕೋಣೆ ಅದಕ್ಕೆ ಯಾವುದರಲ್ಲೂ ಕಮ್ಮಿ ಇಲ್ಲ.



ಗುಹಾಲಯದ ದಿವಾನಖಾನೆ

ಮನೆಯ ಮೇಲಕ್ಕೆ ಗಿಡ–ಬಳ್ಳಿಗಳನ್ನು ಹಬ್ಬಿಸಲಾಗಿದೆ. ಇದರಿಂದಾಗಿ ಬೇಸಿಗೆಯ ಸಮಯದಲ್ಲಿ ಮನೆ ತಣ್ಣಗೆ ಇರುತ್ತದೆ ಹಾಗೂ ಮಳೆಗಾಲದಲ್ಲಿ ಬೆಚ್ಚಗೆ ಇರುವುದಾಗಿ ಆನಂದ ಹೇಳುತ್ತಾರೆ. ಇಲ್ಲೊಂದು ಜೇಡರ ಬಲೆಯಿದೆ. ಇದು ನಿಜವೆಂದೇ ನಾವು ನಂಬುತ್ತೇವೆ. ಆದರೆ ತಂತಿಯಿಂದ ಮಾಡಿದ ಬಲೆ ಮನೆಯ ಅಂದವನ್ನು ಹೆಚ್ಚಿಸುವಂತಿದೆ!

ಗುಹಾಲಯದ ವಾರ್ಡ್‌ರೋಬ್ ಬಗ್ಗೆ ಹೇಳಲೇಬೇಕು. ಹೊರಗಿನಿಂದ ನೋಡಿದರೆ ಕಬ್ಬಿಣದ ತಿಜೋರಿಯಂತೇ ಕಾಣುವ ಈ ಕಪಾಟು ಒಳಗೆ ಅಪಾರ ಸಾಮಾನುಗಳನ್ನು ಹಿಡಿಸುವಂತಿದೆ. ಈ ಗುಹೆಗೆ ಅತ್ಯಾಧುನಿಕ ಲೈಟುಗಳ ಸಂಪರ್ಕವಿದೆ. ಆದರೆ ಹೊರಗಿನಿಂದ ನೋಡಿದರೆ ಕತ್ತಲ ಕೂಪದಂತೇ ಕಾಣುತ್ತದೆ.

ಸುರತ್ಕಲ್‌ನ ನ್ಯಾಷನಲ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಸಿವಿಲ್ ಎಂಜಿನಿಯರಿಂಗ್ ಕಲಿತು ಕೆಲಕಾಲ ಅಧ್ಯಾಪಕರೂ ಆಗಿದ್ದ ಆನಂದಕುಮಾರ್, ತಂದೆಯವರು ಚಂದದ ತುಳಸಿಕಟ್ಟೆ ಮಾಡುತ್ತಿದ್ದುದರಲ್ಲೇ ಸ್ಫೂರ್ತಿ ಪಡೆದು ಕಾಂಕವುಡ್‌ನಲ್ಲಿ ಏನೆಲ್ಲ ಮಾಡತೊಡಗಿ ಮಾಸ್ಟರ್ ಪ್ಲಾನರಿಗೆ ಜೀವನೀಡಿದರು. ಇಂದು ಅವರ ಮೂರು ಜನ ಮಕ್ಕಳು ಕೂಡಾ ಸಿವಿಲ್ ಎಂಜಿನಿಯರಿಂಗ್ ಓದಿ ಮಾಸ್ಟರ್ ಪ್ಲಾನರಿಯಲ್ಲಿ ಹೊಸಹೊಸ ಪ್ರಯೋಗಗಳನ್ನು ಮಾಡುತ್ತಿದ್ದಾರೆ. ಅಂಥ ಒಂದು ಪ್ರಯೋಗವೇ ಸುಮಾರು 20 ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಿಸಿದ ಗುಹಾಲಯ!

ಪ್ರತಿಕ್ರಿಯಿಸಿ: feedback@sudha.co.in